# ಅಮೃತ ಮಹಲ್ ಕಾವಲ್ ಹಿತರಕ್ಷಣಾ ಹೋರಾಟ ಸಮಿತಿ , ಚಿತ್ರದುರ್ಗ

***ನದಿಗಳು, ನೀರು ಹಾಗೂ ಜೀವನಕ್ಕಾಗಿ ಅಂತರರಾಷ್ಟ್ರೀಯ ದಿನ***

***ಮಾರ್ಚ್ 14, ಬೆಳಗ್ಗೆ 11 ರಿಂದ ಮಧ್ಯಾನ 4 ಘಂಟೆ***

***ಅಮೃತ್‌ಮಹಲ್ ಕಾವಲು ಹುಲ್ಲುಗಾವಲು ಪ್ರದೇಶಗಳ ಪಾರಿಸರಿಕ ಪ್ರಾಮುಖ್ಯತೆ ಹಾಗೂ ನೀರು ಸಂರಕ್ಷಣೆ ಮತ್ತು ಜೀವನೋಪಾಯಗಳ ಸುಸ್ಥಿರತೆ ಅಂಶಗಳಿಗೆ ಸಂಬಂಧಿಸಿದಂತೆ***

***ಕಾರ್ಯಗಾರ ಸಭೆ***

ವಿಶ್ವದಾದ್ಯಂತ ಪ್ರತಿ ವರ್ಷ ಮಾರ್ಚ್ 14 ರಂದು ನದಿಗಳು, ನೀರು ಹಾಗೂ ಜೀವನಕ್ಕಾಗಿ ಅಂತರರಾಷ್ಟ್ರೀಯ ದಿನವನ್ನು ಆಚರಿಸಲಾಗುತ್ತದೆ. ಇದು, ನದಿಗಳ ಪುನರುಜ್ಜೀವನಕ್ಕೆ ಸಂಬಂಧಿಸಿದ ಯಶೋಗಾಥೆಗಳನ್ನು ಸ್ಮರಿಸಲು, ವಿನಾಶಕಾರಿ ಅಭಿವೃದ್ಧಿಯ ವಿರುದ್ಧ ಹೋರಾಟ ಹಾಗೂ ಪ್ರತಿಭಟನೆಗಳನ್ನು ಕೈಗೊಳ್ಳಲು ಹಾಗೂ ಜೀವನ ಹಾಗೂ ಜೀವನೋಪಾಯಗಳ ಸುಧಾರಣೆಗಾಗಿ ಪೂರಕ ನೀತಿಗಳು ಹಾಗೂ ಅಭ್ಯಾಸಗಳನ್ನು ಬೇಡುವಂತಹ ದಿನವಾಗಿದೆ. ನಮ್ಮ ನದಿಗಳು, ಜಲಾನಯನ ಪ್ರದೇಶಗಳು ಎದುರಿಸುತ್ತಿರುವ ಅಪಾಯಗಳ ಬಗ್ಗೆ ಒಬ್ಬರಿಗೊಬ್ಬರು ಅರಿವು ಮೂಡಿಸುವ ಹಾಗೂ ಅಲ್ಪ ಪ್ರಮಾಣವಷ್ಟೇ ಬಾಕಿಯಿರುವಂತಹ ನೀರಿನ ಸಂರಕ್ಷಣೆಯೊಂದಿಗೆ, ನಮ್ಮ ಜೀವನವನ್ನು ಹಾಗೂ ಜೀವನೋಪಾಯಗಳನ್ನು ನಾವು ಹೇಗೆ ನಿರ್ಮಿಸಬಹುದು ಮತ್ತು ಸೂಕ್ತ ಶಕ್ತಿಯನ್ನು ಹೇಗೆ ಪ್ರೋತ್ಸಾಹಿಸುವುದು ಎಂಬ ಬಗ್ಗೆ ಪರಸ್ಪರ ಶಿಕ್ಷಿತರಾಗುವಂತಹ ದಿನ ಇದಾಗಿದೆ. ಇದೆಲ್ಲಕ್ಕಿಂತ ಮಿಗಿಲಾಗಿ, ಇದು ಜೊತೆಗೂಡಿ ಕೆಲಸ ಮಾಡುವ ಮೂಲಕ, ಸಂಬಂಧಪಟ್ಟ ಸಮಸ್ಯೆಗಳು ಕೇವಲ ಸ್ಥಳೀಯ ಸ್ವರೂಪದ್ದಲ್ಲ, ಬದಲಾಗಿ ಇದು ಜಾಗತಿಕ ಮಟ್ಟದ ಸಮಸ್ಯೆಯಾಗಿದೆ ಎಂದು ನಿರೂಪಿಸಲು ಸ್ಮರಿಸುವಂತಹ ದಿನವಾಗಿದೆ.

**ಹುಲ್ಲುಗಾವಲುಗಳು ಹಾಗೂ ಪರಿಸರವ್ಯವಸ್ಥೆಗಳನ್ನು – ಅತೀ ವೇಗವಾಗಿ ಕಣ್ಮರೆಯಾಗುತ್ತಿರುವಂತಹ ನಿರ್ಣಾಯಕ ಜಲಾನಯನ ಪ್ರದೇಶಗಳನ್ನು ಉಳಿಸಲು ಒಗ್ಗಟ್ಟಾಗುವ ದಿನ**

ಹುಲ್ಲುಗಾವಲುಗಳು ಸಾಮಾನ್ಯವಾಗಿ, ಕಾಡಿನ ಬೆಳವಣಿಗೆಗೆ ಅಗತ್ಯವಿರುವಷ್ಟು ಕ್ರಮಬದ್ಧ ಮಳೆಯಾಗದಿರುವಂತಹ ಪ್ರದೇಶಗಳಲ್ಲಿ, ಆದರೆ ಮರಳುಗಾಡನ್ನು ಸೃಷ್ಟಿಸುವಷ್ಟು ಕಡಿಮೆ ಇಲ್ಲದಿರುವಂತಹ ಪ್ರದೇಶಗಳಲ್ಲಿ ಕಂಡು ಬರುತ್ತವೆ. ಅಮೃತ್‌ಮಹಲ್ ಕಾವಲುಗಳು ಶತಮಾನಗಳಿಂದ, ಸ್ಥಳೀಯ ಕುರುಬ ಹಾಗೂ ಕೃಷಿ ಸಮುದಾಯದ ಜನರ ಸಾಂಪ್ರದಾಯಿಕ ಜ್ಞಾನ ಹಾಗೂ ಬುದ್ದಿವಂತಿಕೆಯೊಂದಿಗೆ ಅನ್ಯೋನ್ಯ ಸಂಬಂಧವಿರುವಂತಹ ವ್ಯವಸ್ಥೆಯಿಂದ ರಕ್ಷಿಸಲ್ಪಡುತ್ತಿರುವಂತಹ ಹುಲ್ಲುಗಾವಲು ಪರಿಸರ ಪ್ರದೇಶಗಳಾಗಿವೆ. ಸ್ವಾತಂತ್ರದ ಸಮಯದಲ್ಲಿ ಕರ್ನಾಟಕದಲ್ಲಿ 400,000ಕ್ಕೂ ಹೆಚ್ಚಿನ ಎಕರೆ ಪ್ರದೇಶದಷ್ಟಿದ್ದ ಈ ಹುಲ್ಲುಗಾವಲುಗಳು ಈಗ ಕೇವಲ 30,000 ಎಕರೆಗಳಷ್ಟು ಮಾತ್ರ ಉಳಿದಿವೆ. ಕೈಗಾರಿಕೆಗಳು ಹಾಗೂ ನಗರಾಭಿವೃದ್ಧಿಗೆ ಸಂಬಂಧಿಸಿದಂತಹ ಅಜಾಗರೂಕ ಯೋಜನೆಗಳಿಗೆ ಈ ಅಮೂಲ್ಯ ಹುಲ್ಲುಗಾವಲು ಪ್ರದೇಶಗಳನ್ನು ಹಂಚಿಕೆ ಮಾಡುತ್ತಿರುವುದು ಈ ಪರಿಸರ ವ್ಯವಸ್ಥೆಗಳಿಗೆ ಪ್ರಮುಖ ಬೆದರಿಕೆಯಾಗಿದೆ. ಇಂತಹ ಅಮೂಲ್ಯವಾದ ಹುಲ್ಲುಗಾವಲು ಪ್ರದೇಶಗಳನ್ನು 'ಒಣಭೂಮಿ' ಎಂದು ಪರಿಗಣಿಸಲ್ಪಡುತ್ತಿರುವುದು ಆಘಾತಕಾರಿ ವಿಷಯವಾಗಿದೆ. ಬಲಹೀನ ಅಥವಾ ಅನುಪಸ್ಥಿತ ಕಾನೂನು ರಕ್ಷಣೆಗಳ ಕಾರಣದಿಂದಾಗಿ, ಪ್ರಸ್ತುತ ವಿಶ್ವದಲ್ಲಿ ಕಾವಲ್ ಹುಲ್ಲುಗಾವಲುಗಳು ವಿನಾಶದ ಅಂಚಿನಲ್ಲಿರುವಂತಹ ಪರಿಸರ ವ್ಯವಸ್ಥೆಗಳಾಗಿವೆ.

ಈ ಕಾವಲ್ ಹುಲ್ಲುಗಾವಲುಗಳು ವಿನಾಶದ ಅಂಚಿನಲ್ಲಿರುವಂತಹ ಕೃಷ್ಣಮೃಗ, ಲೆಸ್ಸರ್ ಫ್ಲಾರಿಕನ್, ಗ್ರೇಟ್ ಇಂಡಿಯನ್ ಬಸ್ಟರ್ಡ್ (ಇಡೀ ದಕ್ಷಿಣ ಏಷ್ಯಾ ಪ್ರಾಂತ್ಯದಲ್ಲಿ ಈ ಪ್ರಾಣಿಗಳು 200ಕ್ಕಿಂತಲೂ ಕಡಿಮೆಯಿವೆ ಮತ್ತು ಕೂಡಲೇ ಯಾವುದಾದರೂ ಸಂರಕ್ಷಣಾ ಕ್ರಮಗಳನ್ನು ಕೈಗೊಳ್ಳದಿದ್ದರೆ ಒಂದೆರೆಡು ದಶಕಗಳಲ್ಲಿ ಕಣ್ಮರೆಯಾಗುವಂತಹ ಜೀವ ಸಂಕುಲ) ಹಾಗೂ ಒಂದು ಕಾಲದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ವಿರುದ್ಧ ಹೋರಾಡಿದಂತಹ ಹೈದರ್ ಆಲಿ ಹಾಗೂ ಟಿಪ್ಪು ಸುಲ್ತಾನರ ಬೃಹತ್ ಸೈನ್ಯಕ್ಕೆ ಅಗತ್ಯ ಹಾಗೂ ಪೂರಕ ಬೆಂಬಲ ಒದಗಿಸಿದಂತಹ, ಬಲಿಷ್ಠ ತಳಿ ಹಾಗೂ ಇನ್ನು ಕೆಲವೇ ಕೆಲವು ಸಂಖ್ಯೆಯಷ್ಟು ಉಳಿದಿರುವಂತಹ ಅಮೃತ್ ಮಹಲ್ ದನಗಳನ್ನು ಬೆಂಬಲಿಸುವಂತಹ ಸ್ಥಳಗಳಾಗಿವೆ. ಜೊತೆಗೆ ಈ ಹುಲ್ಲುಗಾವಲುಗಳು, ನಮ್ಮ ಆಹಾರ ಬೆಳೆಗಳಿಗೆ ಸ್ಥಿತಿಸ್ಥಾಪಕತ್ವವನ್ನು ಒದಗಿಸುವ ಸಾಮರ್ಥ್ಯವಿರುವಂತಹ, ವಾತಾವರಣ ಬದಲಾವಣೆಗಳಿಂದಾಗಿ ಉಂಟಾಗುವ ವಿಕೋಪಗಳಿಂದಾಗಿ, ನಿರಂತರವಾಗಿ ಉತ್ಪಾದನೆ ಸವಾಲನ್ನು ಎದುರಿಸುತ್ತಿರುವಂತಹ ವಿವಿಧ ವನ್ಯ ವಿಧಗಳ ಹುಲ್ಲುಗಳು ಬೆಳೆಯುತವಂತಹ ಅಮೂಲ್ಯ ಸ್ಥಳಗಳಾಗಿವೆ. ಹಗುರವಾದ ಅಲೆಗಳ ರೂಪದಲ್ಲಿ ಕಂಡು ಬರುವಂತಹ ಈ ಭೂಪ್ರದೇಶಗಳು, ಅಮೂಲ್ಯ ಮಳೆನೀರನ್ನು

ತಡೆಹಿಡಿಯಲು ಹಾಗೂ ಕೊಯ್ಲು ಮಾಡಲು ನೆರವಾಗುವಂತಹ, ವಿವಿಧ ಜಾತಿಯ ಔಷಧೀಯ ಗುಣಗಳುಳ್ಳ ಸಸಿಗಳಿಗೆ ಬೆಂಬಲ ಒದಗಿಸುವಂತಹ ಹಾಗೂ ಇಂಗಾಲವನ್ನು ಹೀರಿಕೊಳ್ಳುವಂತಹ, ಪ್ರಮುಖ ಪಾತ್ರಗಳನ್ನು ನಿರ್ವಹಿಸಲು ನೆರವಾಗುತ್ತದೆ. ಈಗಲೂ ಸಾವಿರಾರು ಗ್ರಾಮೀಣ ಸಮುದಾಯಗಳು ನಮಗೆ ಉಣ್ಣೆ, ಮಾಂಸ ಹಾಗೂ ಹಾಲನ್ನು ಸರಬರಾಜು ಮಾಡುವ ಮೂಲಕ, ತಮ್ಮ ಜೀವನೋಪಾಯಕ್ಕಾಗಿ, ಗೌರವಯುತ ಜೀವನ ನಡೆಸಲು ಈ ಹುಲ್ಲುಗಾವಲುಗಳನ್ನು ಅವಲಂಭಿಸಿವೆ. ಜಗತ್ತಿನಾದ್ಯಂತ ಹಲವು ರಾಷ್ಟ್ರಗಳು ಹಾಗೂ ಸಮುದಾಯಗಳು, ಇಂತಹ ಅಮೂಲ್ಯವಾದ ಹುಲ್ಲುಗಾವಲು ಪ್ರದೇಶಗಳನ್ನು ಸಂರಕ್ಷಿಸಲು ಕಾರ್ಯೋನ್ಮುಖರಾಗಿರುವಂತಹ ಈ ಸಮಯದಲ್ಲಿ, ಜಗತ್ತಿಗೆ ಸಶಸ್ತ್ರಗಳನ್ನು ತಯಾರಿಸಿ ಸರಬರಾಜು ಮಾಡುವಂತಹ, ಬೃಹತ್ ಮಿಲಿಟರಿ ಕೈಗಾರಿಕೆ ಸಂಕೀರ್ಣ ಸ್ಥಾಪಿಸಲು, ಆಧುನಿಕ ಪರಮಾಣು ಪುಷ್ಟೀಕರಣ, ಬೃಹತ್ 'ವಿಜ್ಞಾನ ನಗರ', ಇತ್ಯಾದಿಗಳ ನಿರ್ಮಾಣಕ್ಕಾಗಿ ಈ ಭೂಮಿಯನ್ನು ಹಂಚಿಕೆ ಮಾಡುವ ಮೂಲಕ ಕರ್ನಾಟಕವು ಮಾರಕ ಕ್ರಮವನ್ನು ಕೈಗೊಂಡಿದೆ.

**ಚಿತ್ರದುರ್ಗದ ಚಳ್ಳಕೆರೆಯಲ್ಲಿರುವ ದೊಡ್ಡ ಉಳ್ಳರ್ತಿಯಲ್ಲಿ; ನದಿಗಳು, ನೀರು ಹಾಗೂ ಜೀವನ ಕ್ರಮಕ್ಕಾಗಿ ಅಂತರರಾಷ್ಟ್ರೀಯ ದಿನಾಚರಣೆ**

ಚಿತ್ರದುರ್ಗದಲ್ಲಿ, ಬಹುಪಾಲು ವರ್ಷಪೂರ್ತಿ ಒಣಗಿದ ಪರಿಸ್ಥಿತಿಯಲ್ಲಿಯೇ ಕಂಡು ಬರುವಂತಹ ವೇದಾವತಿ ನದಿಯಲ್ಲದೆ, ಇತರೆ ಯಾವುದೇ ಪ್ರಮುಖ ನೀರಿನ ಸಂಪನ್ಮೂಲವಿಲ್ಲ. ಅಂತರ್ಜಲ ಮಟ್ಟವು ತೀವ್ರವಾಗಿ ಇಳಿಮುಖವಾಗುತ್ತಿರುವ ಹಿನ್ನೆಲೆಯಲ್ಲಿ ಅಂತರ್ಜಲವನ್ನು ಅವಲಂಭಿಸುವುದು ಬಹಳ ದುಬಾರಿ ಹಾಗೂ ಅತೀ ಹೆಚ್ಚಿನ ಫ್ಲೋರಿನ್ ಅಂಶದಿಂದಾಗಿ ಸಾರ್ವಜನಿಕರಲ್ಲಿ ಆರೋಗ್ಯ ಸಮಸ್ಯೆಗಳ ಸೃಷ್ಟಿಗೆ ಕಾರಣವಾಗಿದೆ. ಜಿಲ್ಲೆಯು, ಜಲಾನಯನ ಪ್ರದೇಶಗಳ ಪಾತ್ರ ನಿರ್ವಹಿಸುವ ಮೂಲಕ ಬೆಂಬಲ ಒದಗಿಸುವ ಕಾವಲ್‌ಗಳಿಂದ ಬೆಂಬಲಿತವಾಗಿರುವ ನದಿಗಳು ಹಾಗೂ ತೊರೆಗಳಂತಹ ಸಾಂಪ್ರದಾಯಿಕ ನೀರು ಕೊಯ್ಲು ತಂತ್ರಗಾರಿಕೆಗಳ ಮೂಲಕ, ಬಹುಪಾಲು ಮಳೆಯನ್ನೇ ಅವಲಂಭಿಸಿದೆ. ಈಗ, ಬೃಹತ್ ಮಿಲಿಟರಿ ಕೈಗಾರಿಕೆ ಸಂಕೀರ್ಣ ಸ್ಥಾಪನೆಗಾಗಿ ಈ ಕಾವಲ್ ಹುಲ್ಲುಗಾವಲು ಪ್ರದೇಶಗಳ ಹಂಚಿಕೆಯಿಂದಾಗಿ, ಇಡೀ ಜಿಲ್ಲೆ ತೀವ್ರ ನೀರಿನ ಕೊರತೆಯನ್ನು ಎದುರಿಸುವುದರ ಜೊತೆಗೆ, ವಿಸ್ಮಯಕಾರಿ ಹಾಗೂ ಅದ್ಭುತ ಜೀವವೈವಿಧ್ಯತೆಯನ್ನು ಹೊಂದಿರುವಂತಹ ಈ ಅದ್ಭುತ ಹುಲ್ಲುಗಾವಲುಗಳು, ಮಾನವನ ಆರೋಗ್ಯ ಹಾಗೂ ಪರಿಸರಕ್ಕೆ ಮಾರಕವಾಗಬಹುದಾದಂತಹ ಪರಿಸರ ಸೃಷ್ಟಿಗೆ ಕಾರಣವಾಗುವಂತಹ ಸ್ಥಳವಾಗಲಿದೆ. ಇದರ ಜೊತಗೆ, 60ಕ್ಕೂ ಹೆಚ್ಚಿನ ಗ್ರಾಮಗಳಲ್ಲಿ ವಾಸಿಸುತ್ತಿರುವಂತಹ 300,000ಕ್ಕೂ ಹೆಚ್ಚಿನ ಜನರ ಸ್ಥಳಾಂತರಕ್ಕೆ ಕಾರಣವಾಗಲಿದೆ ಮತ್ತು ಗ್ರೇಟ್ ಇಂಡಿಯನ್ ಬಸ್ಟರ್ಡ್‌ನಂತಹ, ಹಲವು ನಿರ್ಣಾಯಕ ಹಾಗೂ ಅಳಿವಿನಂಚಿನಲ್ಲಿರುವಂತಹ ಅಪರೂಪದ ಪ್ರಾಣಿಗಳು ಸಂಪೂರ್ಣವಾಗಿ ನಾಶವಾಗುವ ಸಾಧ್ಯತೆಗಳಿಗೆ ಸಜ್ಜಾಗಿದೆ.

ಈ ಕಾವಲು ಭೂಮಿಯ ಹಂಚಿಕೆಯನ್ನು ಪ್ರಶ್ನಿಸಿ ನ್ಯಾಯಾಲಯದಲ್ಲಿ ದಾಖಲಿಸಲಾದ ಸಾರ್ವಜನಿಕ ಹಿತಾಸಕ್ತಿ ದೂರುಗಳಿಗೆ ಪ್ರತಿಕ್ರಿಯಿಸಿ 2014ರ ಆಗಸ್ಟ್ 27ರಂದು, 'ರಾಷ್ಟ್ರೀಯ ಹಸಿರು ನ್ಯಾಯಮಂಡಳಿ' (ದಕ್ಷಿಣ ಪೀಠ), ಸಂಪೂರ್ಣ ಪರಿಸರ ಹಾಗೂ ಸಾಮಾಜಿಕ ಪರಿಣಾಮಗಳನ್ನು ಅರ್ಥ ಮಾಡಿಕೊಳ್ಳದಿರುವವರೆಗೂ, ಸರಿಯಾದ ಅನುಮೋದನೆಗಳು ಹಾಗೂ ಪ್ರಜಾಪ್ರಭುತ್ವ ಪ್ರಕ್ರಿಯೆಗಳಿಗೆ ಗೌರವ ದೊರಕುವವರೆಗೂ, ಈ ಯೋಜನೆಗಳನ್ನು ಮುಂದುವರೆಸದಿರುವಂತೆ ರಾಜ್ಯ ಹಾಗೂ ಕೇಂದ್ರ ಸರ್ಕಾರಗಳಿಗೆ ನಿರ್ದೇಶನಗಳನ್ನು ನೀಡಿದೆ. ಆದರೆ ಈ ನಿರ್ದೇಶನಗಳಿಗೆ ಕಿವಿಗೊಡದೆ ಹಲವು ನಿರ್ಮಾಣ ಚಟುವಟಿಕೆಗಳು ಕಾನೂನುಬಾಹಿರವಾಗಿ ಮುಂದುವರೆದಿವೆ.

**ನದಿಗಳು, ನೀರು ಹಾಗೂ ಜೀವನದ ಕ್ರಮಕ್ಕಾಗಿ ಅಂತರರಾಷ್ಟ್ರೀಯ ದಿನದಂದು ದೊಡ್ಡ ಉಳ್ಳರ್ತಿಗೆ ಬನ್ನಿ!**

ಕರ್ನಾಟಕದ ಅಮೂಲ್ಯ ಸಂರಕ್ಷಣಾ ಸಂಪ್ರದಾಯ ವ್ಯವಸ್ಥೆಯಾಗಿರುವ ನಮ್ಮ ಈ ಹೆಮ್ಮೆಯ ಅಮೃತ್ ಮಹಲ್ ಕಾವಲುಗಳನ್ನು ರಕ್ಷಿಸಲು, ಈ ವಿಶೇಷ ಜೀವವೈವಿಧ್ಯತೆಯ ಬಗ್ಗೆ ಹಾಗೂ ಸಂಬಂಧಪಟ್ಟಂತಹ ಸಾಂಪ್ರದಾಯಿಕ ಜ್ಞಾನದ ಬಗ್ಗೆ ನಮ್ಮ ಹಿರಿಯರಿಂದ ಕಲಿತುಕೊಳ್ಳಲು ಹಾಗೂ ಜಾನಪದ ಹಾಡುಗಳನ್ನು ಹಾಡುವ ಮೂಲಕ ಕಾವಲುಗಳ ಶ್ರೀಮಂತಿಕೆಯನ್ನು ಆಚರಿಸಲು, ವಿನಾಶದಂಚಿನಿಲ್ಲಿರುವಂತಹ, ಅಪರೂಪದ ಪ್ರಾಣಿಗಳನ್ನು ಸಂರಕ್ಷಿಸಲು, ದೊಡ್ಡಉಳ್ಳರ್ತಿಯಲ್ಲಿ ನಮ್ಮೊಂದಿಗೆ ಭಾಗವಹಿಸಲು ನಿಮ್ಮನ್ನು ಆಹ್ವಾನಿಸುತ್ತಿದ್ದೇವೆ.

**ಸಮಯ:** ಬೆಳಗ್ಗೆ 11.00 ಗಂಟೆಯಿಂದ ಸಂಜೆ 4.00ರವರೆಗೆ

**ಸ್ಥಳ:** ದೊಡ್ಡ ಉಳ್ಳರ್ತಿ, ಚಳ್ಳಕೆರೆ ತಾಲ್ಲೂಕು, ಚಿತ್ರದುರ್ಗ

ದಯಮಾಡಿ ಕರಿಯಣ್ಣ (ಮೊಬೈಲ್ ಸಂಖ್ಯೆ: 9900954664), ಹುಮಂತರಾಯಣ್ಣ (9901084588) ಅವರನ್ನು ಸಂಪರ್ಕಿಸುವ ಮೂಲಕ ನಿಮ್ಮ ಭಾಗವಹಿಸುವಿಕೆಯನ್ನು ದೃಢಪಡಿಸಿ.